ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 18-01-1994.

# *ಬ್ರಾಹ್ಮಣ ಜನ್ಮದ ಅದಿಯ ವರದಾನ - ಸ್ನೇಹದ ಶಕ್ತಿ*

(ब्राहमण जन्म का आदि वरदान - स्नेह की शक्ति)

**ಸ್ನೇಹ ಶಕ್ತಿಯ ವರದಾನದಿಂದ ಅಸಂಭವವನ್ನು ಸಂಭವ ಮಾಡಿಸುವ ಸ್ನೇಹ ಸಾಗರನಾದ ಬಾಪ್‌ದಾದಾ ಮಾತನಾಡುತ್ತಿದ್ದಾರೆ.**

ಇಂದು ನಾಲ್ಕೂ ಕಡೆಯಲ್ಲಿ ಇರುವಂತಹ ಸರ್ವ ಮಕ್ಕಳ ಸ್ನೇಹ ಸಂಪನ್ನ ಸ್ಮೃತಿಗಳು ಸಮರ್ಥ ಬಾಪ್‌ದಾದಾರವರ ಬಳಿ, ಸ್ನೇಹದ ಸಾಗರನ ಸಮಾನ ತಲುಪಿದವು. ಪ್ರತಿಯೊಂದು ಮಕ್ಕಳ ಹೃದಯದಲ್ಲಿ ಹೃದಯರಾಮನು ಸಮಾವೇಶವಾಗಿದ್ದಾರೆ ಹಾಗೂ ಹೃದಯರಾಮನ ಹೃದಯದಲ್ಲಿ ಸರ್ವ ಸ್ನೇಹಿ ಮಕ್ಕಳು ಸಮಾವೇಶವಾಗಿದ್ದಾರೆ. ಸ್ನೇಹವು ಬಹಳ ದೊಡ್ಡ ಶಕ್ತಿಯಾಗಿದೆ.

• ಸ್ನೇಹದ ಶಕ್ತಿಯು ಪರಿಶ್ರಮವನ್ನು ಸಹಜಗೊಳಿಸುತ್ತದೆ. ಎಲ್ಲಿ ಪ್ರೀತಿಯಿದೆಯೋ ಅಲ್ಲಿ ಪರಿಶ್ರಮವಾಗುವುದಿಲ್ಲ. ಪರಿಶ್ರಮವು ಮನೋರಂಜನೆ ಆಗಿಬಿಡುತ್ತದೆ, ಆಟವೆನಿಸುತ್ತದೆ.

• ಸ್ನೇಹದ ಶಕ್ತಿಯು ದೇಹ ಹಾಗೂ ದೇಹದ ಪ್ರಪಂಚವನ್ನು ಕ್ಷಣದಲ್ಲಿ ಮರೆಸಿಬಿಡುತ್ತದೆ. ಸ್ನೇಹದಲ್ಲಿ ಏನನ್ನು ಮರೆಸಬೇಕೋ ಅದನ್ನು ಮರೆಸಬಹುದು, ಏನನ್ನು ನೆನಪು ಮಾಡಬೇಕೆಂದು ಬಯಸುವಿರೋ ಅದರಲ್ಲಿ ಸಮಾವೇಶವಾಗಿಬಿಡಬಹುದು.

• ಸ್ನೇಹದ ಶಕ್ತಿಯು ಸಹಜವಾಗಿ ಸಮರ್ಪಣೆ ಮಾಡಿಸಿಬಿಡುತ್ತದೆ.

• ಸ್ನೇಹವು ಸದಾ ಪ್ರತೀ ಸಮಯದಲ್ಲಿ ಪರಮಾತ್ಮನ ಸಂಗ(ಜೊತೆ)ದ ಅನುಭೂತಿ ಮಾಡಿಸುತ್ತದೆ.

• ಸ್ನೇಹವು ಸದಾ ತನ್ನ ಮೇಲೆ ತಂದೆಯ ಆಶೀರ್ವಾದದ ಅಭಯ ಹಸ್ತವು ಛತ್ರಛಾಯೆಯ ಸಮಾನ ಅನುಭವ ಮಾಡಿಸುತ್ತದೆ.

• ಸ್ನೇಹವು ಅಸಂಭವವನ್ನು ಸಂಭವವಾಗಿ ಎಷ್ಟು ಸಹಜವಾಗಿ ಮಾಡಿಬಿಡುತ್ತದೆ ಎಂದರೆ ಆ ಕಾರ್ಯವು ಆಗಿಯೇ ಬಿಡುತ್ತದೆ.

• ಸ್ನೇಹವು ಪ್ರತೀ ಸಮಯ ನಿಶ್ಚಿಂತಸ್ಥಿತಿಯ ಅನುಭವ ಮಾಡಿಸುತ್ತದೆ.

• ಸ್ನೇಹವು ಪ್ರತೀ ಕಾರ್ಯದಲ್ಲಿ ನಿಶ್ಚಿತವಾದ ವಿಜಯೀ ಸ್ಥಿತಿಯ ಅನುಭವ ಮಾಡಿಸುತ್ತದೆ.

ಇಂತಹ ಸ್ನೇಹದ ಶಕ್ತಿಯ ಅನುಭವ ಮಾಡುತ್ತೀರಲ್ಲವೇ? ಬಾಪ್‌ದಾದಾರವರಿಗೆ ಗೊತ್ತಿದೆ- ಅನೇಕ ಜನ್ಮಗಳಲ್ಲಿ ಅನೇಕ ಪ್ರಕಾರದ ಪರಿಶ್ರಮಪಟ್ಟು ಸುಸ್ತಾಗಿರುವ ಅತ್ಮರಾಗಿದ್ದಾರೆ. ಭಿನ್ನ-ಭಿನ್ನ ಬಂಧನಗಳಲ್ಲಿ ಬಂಧಿತರಾಗಿರುವ ಆತ್ಮರಾಗಿರುವ ಕಾರಣ ಪರಿಶ್ರಮ ಪಡುತ್ತಿದ್ದಾರೆ ಆದ್ದರಿಂದ ಬಾಪ್‌ದಾದಾರವರು ಪರಿಶ್ರಮದಿಂದ ಮುಕ್ತರಾಗುವುದಕ್ಕಾಗಿ ಸಹಜ ವಿಧಿ 'ಸ್ನೇಹದ ಶಕ್ತಿ'ಯನ್ನು ಎಲ್ಲಾ ಮಕ್ಕಳಿಗೂ ವರದಾನದವಾಗಿ ಕೊಡುತ್ತಾರೆ. ತಮ್ಮ ಬ್ರಾಹ್ಮಣ ಜೀವನದ ಆದಿಯ ಸಮಯವನ್ನು ನೆನಪು ಮಾಡಿಕೊಂಡರೆ- ಜನ್ಮವಾದಾಗಲೇ ಎಲ್ಲರಿಗೂ ಸ್ನೇಹದ ಶಕ್ತಿಯೇ ಹೊಸ ಜೀವನವನ್ನು ಕೊಟ್ಟಿತು. ಸ್ನೇಹದ ಅನುಭೂತಿಗಾಗಿ ಪರಿಶ್ರಮ ಪಡಬೇಕಾಯಿತೆ? ಪರಿಶ್ರಮ ಪಡಬೇಕಾಗುವುದೇ? ಸಹಜ ಅನುಭವ ಮಾಡಿದಿರಲ್ಲವೆ. ಹಾಗಾದರೆ ಈ ಆದಿ ಜನ್ಮದ ಅನುಭೂತಿಯೇ ವರದಾನವಾಗಿದೆ. ಪ್ರೀತಿಯಲ್ಲಿಯೇ ಮುಳುಗಿಬಿಟ್ಟಿರಿ. ಸದಾ ಈ ಸ್ನೇಹದ ವರದಾನವನ್ನು ಸ್ಮೃತಿಯಲ್ಲಿ ಇಟ್ಟುಕೊಳ್ಳಬೇಕು. ಪರಿಶ್ರಮದ ಸಮಯದಲ್ಲಿಯೂ ಈ ವರದಾನದ ಮೂಲಕ ಪರಿಶ್ರಮವನ್ನು ಪರಿವರ್ತನೆ ಮಾಡಬಹುದು, ಬಾಪ್‌ದಾದಾರವರಿಗೆ ಮಕ್ಕಳು ಪರಿಶ್ರಮ ಪಡುತ್ತಿರುವುದು ಒಳ್ಳೆಯದೆನಿಸುವುದಿಲ್ಲ, ಸ್ನೇಹದ ಶಕ್ತಿಯ ವಿಸ್ಮೃತಿಯು ಪರಿಶ್ರಮದ ಅನುಭವ ಮಾಡಿಸುತ್ತದೆ.

• ಎಷ್ಟೇ ದೊಡ್ಡದಾದ ಎಂತಹ ಪರಿಸ್ಥಿತಿಯೇ ಆಗಿರಬಹುದು. ಪ್ರೀತಿಯಿಂದ-ಸ್ನೇಹದಿಂದ ಪರಿಸ್ಥಿತಿಯೆಂಬ ಪರ್ವತವೂ ಪರಿವರ್ತನೆಯಾಗಿ, ನೀರಿನ ಸಮಾನ ಹಗುರವಾಗಿಬಿಡುತ್ತದೆ. ಕಲ್ಲನ್ನು ನೀರನ್ನಾಗಿ ಮಾಡಿಬಿಡಬಹುದು. ಮಾಯೆಯ ಎಂತಹ ಭಯಾನಕ ರೂಪ ಅಥವಾ ರಾಯಲ್ ರೂಪವನ್ನೇ ಎದುರಿಸಬೇಕಾದರೂ ಸೆಕೆಂಡಿನಲ್ಲಿ, ಸ್ನೇಹದ ಸಾಗರನಲ್ಲಿ ಸಮಾವೇಶವಾದರೆ ಮಾಯೆಯ ಶಕ್ತಿಯು ಸಮಾಪ್ತಿ ಆಗಿಬಿಡುತ್ತದೆ. ತಮ್ಮ ಸಮಾವೇಶ ಮಾಡಿಕೊಳ್ಳುವ ಶಕ್ತಿಯು ಛೂ-ಮಂತ್ರವಲ್ಲ ಆದರೆ ಶಿವ-ಮಂತ್ರವಾಗಿಬಿಡುತ್ತದೆ. ಎಲ್ಲರ ಬಳಿ ಶಿವ- ಮಂತ್ರದ ಶಕ್ತಿಯಿದೆ ಅಲ್ಲವೆ ಅಥವಾ ಕಳೆದುಹೋಗುತ್ತದೆಯೇ? ಶಿವನ ಸ್ನೇಹದಲ್ಲಿ ಸಮಾವೇಶವಾಗಿಬಿಡಿ, ಕೇವಲ ಮುಳುಗಿ ಏಳುವವರಲ್ಲ. ಸ್ವಲ್ಪ ಸಮಯವಾದರೂ ಸ್ಮೃತಿಯಲ್ಲಿ ಇರುತ್ತೀರಾ- ಮಧುರ ತಂದೆ, ಪ್ರಿಯವಾದ ತಂದೆ ಎಂಬ ಸ್ಮೃತಿಯಲ್ಲಿರಿ, ಕೇವಲ ಮುಳುಗಿ ಎದ್ದರೆ ಮಾಯೆಯ ಕಣ್ಣು ತಮ್ಮ ಮೇಲೆ ಬೀಳುತದೆ. ಸಮಾವೇಶ ಆಗಿಬಿಟ್ಟರೆ, ಮಾಯೆಯ ದೃಷ್ಟಿಯಿಂದ ದೂರವಾಗಿಬಿಡುತ್ತೀರಿ. ಹಾಗೂ ಇದೇನೂ ಮಾಡಲು ಬರದಿದ್ದರೆ ಸ್ನೇಹದ ಶಕ್ತಿಯು ಜನ್ಮದ ವರದಾನವಾಗಿದೆ. ಆ ವರದಾನದಲ್ಲಿ ಮುಳುಗಿಬಿಡಿ. ಮುಳುಗುವುದು ಬರುವುದಿಲ್ಲವೇ? ಸ್ನೇಹವಂತು ಸಹಜವಲ್ಲವೆ! ಎಲ್ಲರಿಗೂ ಅನುಭವವಿದೆ ಅಲ್ಲವೆ! ಯಾರಿಗೆ ಬ್ರಾಹ್ಮಣ ಜೀವನದಲ್ಲಿ ಅತ್ಮಿಕ ಸ್ನೇಹದ ಅನುಭೂತಿಯಿಲ್ಲ? ಯಾರಾದರೂ ಇದ್ದೀರಾ?

•ಸ್ನೇಹವೇ ಸಹಜ ಯೋಗವಾಗಿದೆ. ಸ್ನೇಹದಲ್ಲಿ ಸಮಾವೇಶವಾಗುವುದೇ ಸಂಪೂರ್ಣ ಜ್ಞಾನವಾಗಿದೆ.

• ಇಂದಿನ ದಿನದ ಮಹತ್ವವೂ ಸ್ನೇಹದ್ದಾಗಿದೆ.

ಅಮೃತವೇಳೆಯಿಂದ ವಿಶೇಷವಾಗಿ ಯಾವ ಪ್ರಕಂಪನಗಳಲ್ಲಿ ತೇಲಾಡುತ್ತಿದ್ದೀರಿ? ಬಾಪ್‌ದಾದಾರವರ ಸ್ನೇಹದಲ್ಲಿಯೇ ತೇಲಾಡುತ್ತಿದ್ದೀರಿ. ಸರ್ವ ಆತ್ಮರಲ್ಲಿ ಒಬ್ಬ ತಂದೆಯ ಹೊರತು ಮತ್ತೇನಾದರೂ ನೆನಪಿರುವುದೇ? ಸಹಜ ನೆನಪಿರುತ್ತದೆ ಅಲ್ಲವೆ ಅಥವಾ ಪರಿಶ್ರಮ ಪಡಬೇಕಾಗುತ್ತದೆಯೇ? ಹಾಗಾದರೆ ಸಹಜ ಹೇಗಾಯಿತು? ಸ್ನೇಹದ

ಕಾರಣದಿಂದ. ಹಾಗಾದರೆ ಇಂದಿನ ದಿನವಷ್ಟೇ ಸ್ನೇಹವಿತ್ತೇ? ಸಂಗಮಯುಗ ಇರುವುದೇ ಪರಮಾತ್ಮನ ಸ್ನೇಹದ ಯುಗ. ಅಂದಮೇಲೆ ಯುಗದ ಮಹತ್ವವನ್ನು ತಿಳಿದುಕೊಂಡು ಸ್ನೇಹದ ಅನುಭೂತಿಯನ್ನು ಅನುಭವ ಮಾಡಿರಿ. ಸ್ನೇಹದ ಸಾಗರನು ಸ್ನೇಹದ ವಜ್ರ-ವೈಡೂರ್ಯಗಳ ತಟ್ಟೆಗಳನ್ನು ತುಂಬಿ-ತುಂಬಿ ಕೊಡುತ್ತಿದ್ದಾರೆ. ಅದರಿಂದ ತಮ್ಮನ್ನು ಸದಾಕಾಲಕ್ಕಾಗಿ ಸಂಪನ್ನ ಮಾಡಿಕೊಳ್ಳಿರಿ. ಸ್ವಲ್ಪ ಅನುಭವಗಳಲ್ಲಿಯೇ ಖುಷಿಯಾಗಿಬಿಡಬಾರದು. ಸಂಪನ್ನರಾಗಿಬಿಡಿ. ಭವಿಷ್ಯದಲ್ಲಂತು ಸ್ಥೂಲ ವಜ್ರ-ವೈಡೂರ್ಯಗಳಿಂದ ಶೃಂಗರಿಸಿಕೊಳ್ಳುವಿರಿ. ಈ ಪರಮಾತ್ಮನ ಪ್ರೀತಿಯ ವಜ್ರ-ವೈಡೂರ್ಯಗಳು ಅಮೂಲ್ಯವಾದವುಗಳು. ಹಾಗಾದರೆ ಇದರಿಂದ ಸದಾ ಶೃಂಗಾರಿತರಾಗಿರಿ.

ನಾಲ್ಕೂ ಕಡೆಯಲ್ಲಿರುವ ಮಕ್ಕಳ ನೆನಪು, ಸ್ನೇಹದ ಹಾಡು ಸದಾಕಾಲವೂ ಬಾಪ್‌ದಾದಾರವರು ಆಲಿಸುತ್ತಿರುತ್ತಾರೆ ಆದರೆ ಇಂದು ವಿಶೇಷವಾಗಿ ಸ್ನೇಹ ಸ್ವರೂಪ ಮಕ್ಕಳಿಗೆ ಸ್ನೇಹದ ರಿಟರ್ನ್‌ಲ್ಲಿ *ಸದಾ ಸ್ನೇಹಿ ಭವ!* ಸದಾ ಸ್ನೇಹದ ವರದಾನದ ಮೂಲಕ ಸಹಜವಾಗಿ ಹಾರುವ ಕಲೆಯ ವಿಶೇಷ ವರದಾನವನ್ನು ಪುನಃ ಕೊಡುತ್ತಿದ್ದೇವೆ. ಸದಾ ಹೇಗಾದರೆ ಚಿಕ್ಕ ಮಕ್ಕಳಿಗೆ ಯಾವುದೇ ಕಷ್ಟದ ಅನುಭೂತಿಯಾದಾಗ ಅಥವಾ ಪರಿಸ್ಥಿತಿಗಳು ಬಂದಾಗ ಮಾತಾಪಿತನ ಮಡಿಲಿನಲ್ಲಿ ಸಮಾವೇಶ ಆಗಿಬಿಡುತ್ತಾರೆ. ಆದೇರೀತಿ ಸೆಕೆಂಡಿನಲ್ಲಿ ಸ್ನೇಹದ ಮಡಿಲಿನಲ್ಲಿ ಸಮಾವೇಶ ಆಗಿಬಿಟ್ಟರೆ ಪರಿಶ್ರಮದಿಂದ ಪಾರಾಗಿಬಿಡುತ್ತೀರಿ. ಸೆಕೆಂಡಿನಲ್ಲಿ ಹಾರುವ ಕಲೆಯ ಮೂಲಕ ಬಾಪ್‌ದಾದಾರವರ ಬಳಿ ತಲುಪಿದರೆ, ಎಂತಹ ಸ್ವರೂಪದಿಂದ ಬಂದಿರುವ ಮಾಯೆಯೂ ತಮ್ಮನ್ನು ಟಚ್ ಮಾಡಲೂ ಸಾಧ್ಯವಿಲ್ಲ. ಏಕೆಂದರೆ ಪರಮಾತ್ಮನ ಛತ್ರಛಾಯೆಯ ಒಳಗೇನು ಆದರೆ ದೂರದಿಂದಲೂ ಮಾಯೆಯ ನೆರಳೂ ಸಹ ಬರಲು ಸಾಧ್ಯವಿಲ್ಲ. ಹಾಗಾದರೆ ಮಗುವಾಗುವುದು ಅರ್ಥಾತ್ ಮಾಯೆಯಿಂದ ಪಾರಾಗುವುದು. ಮಗುವಾಗಿರುವುದಂತೂ ಒಳ್ಳೆಯದಲ್ಲವೆ. ಮಗುವಾಗುವುದರ ಅರ್ಥವೇ ಆಗಿದೆ- ಸ್ನೇಹದಲ್ಲಿ ಸಮಾವೇಶವಾಗುವುದು ಒಳ್ಳೆಯದು-

**ನಾಲ್ಕೂ ಕಡೆಯಲ್ಲಿನ ಹೃದಯರಾಮನ ಹೃದಯದಲ್ಲಿ ಸಮಾವೇಶವಾಗಿರುವ ಮಕ್ಕಳಿಗೆ, ಸದಾ ಪರಿಶ್ರಮವನ್ನು ಪ್ರೀತಿಯಲ್ಲಿ ಪರಿವರ್ತನೆ ಮಾಡುವಂತಹ ಶಕ್ತಿಶಾಲಿ ಆತ್ಮರಿಗೆ, ಸದಾ ಪರಮಾತ್ಮನ ಸ್ನೇಹದ ಸಂಗಮಯುಗವನ್ನು ಮಹಾನ್ ಎಂದು ಅನುಭವ ಮಾಡುವಂತಹ ಶ್ರೇಷ್ಠ ಆತ್ಮರಿಗೆ, ಸದಾ ಸ್ನೇಹದ ಶಕ್ತಿಯಿಂದ ತಂದೆಯ ಸಂಗ ಹಾಗೂ ಆಶೀರ್ವಾದಗಳ ಅಭಯ ಹಸ್ತವನ್ನು ಅನುಭವ ಮಾಡುತ್ತಾ, ಅನ್ಯರಿಗೂ ಅನುಭವ ಮಾಡಿಸುವಂತಹ ವಿಶೇಷ ಅತ್ಮರಿಗೆ, ಸದಾ ಸ್ನೇಹದ ಸಾಗರನಲ್ಲಿ ಸಮಾವೇಶವಾಗಿರುವ ಸಮಾನ ಮಕ್ಕಳಿಗೆ, ಸ್ನೇಹದ ಸಾಗರ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

**ದಾದಿಯವರೊಂದಿಗೆ ವಾರ್ತಾಲಾಪ.**

ಇಂದಿನ ದಿನ ಏನೇನು ಸ್ಮೃತಿಯಿದೆ? ವಿಶೇಷವಾಗಿ ವಿಲ್ ಪವರ್ ನ ಕೈ ನೆನಪಿಗೆ ಬರುತ್ತಿದೆಯೇ? ವಿಲ್ ಪವರ್ ಎಲ್ಲಾ ಕಾರ್ಯಗಳನ್ನು ಸಹಜ ಮಾಡಿಸಿಬಿಡುತ್ತದೆ. ಬ್ರಹ್ಮಾ ತಂದೆಯು ಹೆಚ್ಚಿನದಾಗಿ ಸ್ಮೃತಿಯಲ್ಲಿ ಬಂದರೇ ಅಥವಾ ಬಾಪ್‌ದಾದಾ ಇಬ್ಬರೂ ಸ್ಮತಿಯಿದ್ದರೇ? ಏನೇ ಆದರೂ ಬ್ರಹ್ಮಾತಂದೆಯ ಚರಿತ್ರೆಯು ಎಲ್ಲರಿಗೂ ವಿಶೇಷವಗಿ ನೆನಪಿಗೆ

ಬರುತ್ತಿರುತ್ತದೆ. ಬಾಪ್‌ದಾದಾ ಯಾವಾಗ ಕಂಬೈಂಡ್ ಆದರೋ ಆಗಲೇ ಬ್ರಹ್ಮಾತಂದೆಯು ಬ್ರಹ್ಮಾ ಆಗಿಬಿಟ್ಟರು. ಪರಮಾತ್ಮನ ಪ್ರವೇಶತೆಯ ಜೊತೆಯೇ ಬ್ರಹ್ಮಾರವರ ಕಾರ್ಯವೂ ಆರಂಭವಾಯಿತು. ಈ ಅವ್ಯಕ್ತ ಸ್ವರೂಪದ ಅವ್ಯಕ್ತ ರೂಪದ ಚರಿತ್ರೆಯೂ ಸಹ ಭಿನ್ನ ಹಾಗೂ ಪ್ರಿಯವಾಗಿದೆ. 14 ವರ್ಷದ ಸೇವೆಯ ಚರಿತ್ರೆಯ ಆದಿಯಿಂದ ನೆನಪು ಮಾಡಿಕೊಳ್ಳಿರಿ. ಎಷ್ಟೊಂದು ತೀವ್ರ ಗತಿಯ ಚರಿತ್ರೆಯಾಗಿದೆ. ಅವ್ಯಕ್ತವಾಗುವುದು ಅರ್ಥಾತ್ ತೀವ್ರ ಗತಿಯಿಂದ ಸರ್ವರ ಕಾರ್ಯವಾಗುವುದು. ಸಹಜ ಪರಿವರ್ತನೆಯೂ ಸಹ ತೀವ್ರ ಹಾಗೂ ಸೇವೆಯ ವೃದ್ಧಿಯ ಗತಿಯೂ ತೀವ್ರ, ತೀವ್ರ ಗತಿಯಿಂದ ಆಯಿತಲ್ಲವೇ? ಆದ್ದರಿಂದ ಅವ್ಯಕ್ತವಾಗುವ ಸಮಯವೂ ಸಹ ತೀವ್ರ ಗತಿಯಿಂದ ಸಿಕ್ಕಿದೆಯೆಂದರೆ ಸೇವೆಗೂ ತೀವ್ರ ಗತಿಯದೇ ಸಿಕ್ಕಿದೆ. ಅವ್ಯಕ್ತ ಪಾತ್ರದಲ್ಲಿ ಬರುವಂತಹ ಆತ್ಮರೂ ಸಹ ಪುರುಷಾರ್ಥದಲ್ಲಿ ತೀವ್ರ ಗತಿಯ ಭಾಗ್ಯವು ಸಹಜವಾಗಿ ಸಿಕ್ಕಿರುತ್ತದೆ. ಈ ಸಮಯದಲ್ಲಿ ಬಂದಿರುವಂತಹ ಆತ್ಮರಿಗೆ ಲಾಸ್ಟ್ ಸೊ ಫಾಸ್ಟ್, ಫಾಸ್ಟ್ ಸೊ ಫಸ್ಟ್ ಆಗುವ ವರದಾನವು ಪ್ರಾಪ್ತಿಯಾಗಿದೆ(ಸಭೆಯಲ್ಲಿ).

ವರದಾನವನ್ನು ಕಾರ್ಯರೂಪದಲ್ಲಿ ತನ್ನಿರಿ. ಕೇವಲ ಸ್ಮೃತಿಯವರೆಗು. ಸಮಯದನುಸಾರ ವರದಾನವನ್ನು ಸ್ವರೂಪದಲ್ಲಿ ತಂದುಕೊಳ್ಳಿರಿ. ಇದರಿಂದ ಫಾಸ್ಟ್ ಗತಿಯ ಅನುಭವ ಮಾಡುವಿರಿ, ಅವ್ಯಕ್ತ ಪಾಲನೆಯು ಸಹಜವಾಗಿಯೇ ಶಕ್ತಿಶಾಲಿಯನ್ನಾಗಿ ಮಾಡುವಂತದ್ದಾಗಿದೆ ಆದ್ದರಿಂದ ಎಷ್ಟು ವೃದ್ಧಿ ಹೊಂದಬೇಕೆಂದು ತಿಳಿಯುವಿರೋ, ಅಷ್ಟು ಮುಂದುವರೆಯಬಹುದು. ಬಾಪ್‌ದಾದಾ ಹಾಗೂ ನಿಮಿತ್ತ ಅತ್ಮರು ತಮ್ಮೆಲ್ಲರ ಮೇಲೆ ಸದಾ ಹಾಗೂ ವಿಶೇಷವಾಗಿ ಮುಂದೆ ಹಾಗೂ ಹಾರುವ ಆಶೀರ್ವಾದವಿದೆ. ಈ ರೀತಿಯಿದೆಯಲ್ಲವೇ? ದಾದಿಯವರ ಆಶೀರ್ವಾಗಳೂ ಇದೆ. ಕೇವಲ ಅದರ ಲಾಭವನ್ನು ಪಡೆದುಕೊಳ್ಳಿರಿ. ಸಿಗುವುದಂತು ಬಹಳಷ್ಟು ಸಿಗುತ್ತದೆ. ಉಪಯೋಗ ಮಾಡುವುದು ಕಡಿಮೆ ಮಾಡುತ್ತೀರಿ. ಕೇವಲ ಬುದ್ಧಿಯನ್ನು ಪಕ್ಕಕ್ಕೆ ಇಟ್ಟುಬಿಡಬಾರದು. ಅನುಭವಿಸಿರಿ, ಖರ್ಚು ಮಾಡಬೇಕು. ಉಪಯೋಗ ಮಾಡುವುದು, ಖರ್ಚು ಮಾಡುವುದು ಬರುತ್ತದೆಯೇ ಅಥವಾ ಸಂಭಾಲನೆ ಮಾಡಿಟ್ಟುಕೊಳ್ಳುವಿರಾ? ಬಹಳ ಚೆನ್ನಾಗಿದೆ, ಬಹಳ ಚೆನ್ನಾಗಿದೆ ಇದಾಗಿದೆ ಸಂಭಾಲನೆ ಮಾಡಿಟ್ಟುಕೊಳ್ಳುವುದು. ಒಳ್ಳೆಯದನ್ನು ಸ್ವಯಂಗಾಗಿ ಹಾಗೂ ಅನ್ಯರಿಗಾಗಿ ಕಾರ್ಯದಲ್ಲಿ ಉಪಯೋಗಿಸಿರಿ. ಇಲ್ಲಿ ಖರ್ಚು ಮಾಡುವುದು ಅರ್ಥಾತ್ ವೃದ್ಧಿ ಮಾಡುವುದಾಗಿದೆ. ಹೇಗೆ ಯಾವುದೇ ಅಮೂಲ್ಯವಾದ ವಸ್ತುವಾಗಿದ್ದರೆ ಅದನ್ನು ಎಲ್ಲಿಡುತ್ತಾರೆ? (ಲಾಕರ್‌ನಲ್ಲಿ) ಉಪಯೋಗ ಮಾಡುವುದಿಲ್ಲ. ಲಾಕರ್‌ನಲ್ಲಿ ಇಟ್ಟು ಖುಷಿಯಾಗುತ್ತಾರೆ. ಹಾಗಾದರೆ ಕೆಲವೊಮ್ಮೆ ಹೀಗೆ ಮಾಡುತ್ತೀರಾ- ಈ ಜ್ಞಾನಬಿಂದು ಬಹಳ ಚೆನ್ನಾಗಿದೆ. ವಿಧಿಯೂ ಬಹಳ ಚೆನ್ನಾಗಿದೆ ಎಂದು ಕೇವಲ ಬುದ್ಧಿಯ ಲಾಕರ್‌ನಲ್ಲಿ ನೋಡಿ ಖುಷಿಯಾಗಿಬಿಡುತ್ತಾರೆ. ಅದೇರೀತಿ ತಾವೆಲ್ಲರೂ ಲಾಕರ್ನನಲ್ಲಿ ಇಡುತ್ತೀರಾ ಅಥವಾ ಉಪಯೋಗಿಸುತ್ತೀರಾ? ಒಳ್ಳೆಯದು-

ಪಾಂಡವ ಸೇನೆಯ ಗತಿಯೇನಾಗಿದೆ? (ಚೆನ್ನಾಗಿದೆ) ಕೇವಲ ಚೆನ್ನಾಗಿದೆ-ಚೆನ್ನಾಗಿದೆ ಎಂದು ಹೇಳುವವರಂತು ಅಲ್ಲವಲ್ಲವೆ. ಇಂತಹ ಸೈನ್ಯವು ತಯಾರಾಗಲಿ ಅದರಿಂದ ಸೆಕೆಂಡಿನಲ್ಲಿ ಯಾರಿಗಾದರೂ ಆದೇಶ ಸಿಗಲಿ ಅದನ್ನು ಮಾಡಿಬಿಡಬೇಕು. ಈ ರೀತಿ ತಯಾರಾಗಿದ್ದೀರಾ? ಶಕ್ತಿ ಸೇನೆಯು ತಯಾರಾಗಿದೆಯೇ? ಶಕ್ತಿಯ ಸೇವೆಯೇ ತಮ್ಮದಾಗಿದೆ.

ಪಾಂಡವರದೇ ಅವರದಾಗಿದೆ. ಪಾಂಡವರ ಸಹಯೋಗವಿಲ್ಲದೆ ಶಕ್ತಿಯರು ವೃದ್ಧಿಯಾಗಲು ಸಾಧ್ಯವಿಲ್ಲ, ಶಕ್ತಿಯರ ಸಹಯೋಗವಿಲ್ಲದೆ ಪಾಂಡವರೂ ವೃದ್ಧಿಯಾಗಲು ಸಾಧ್ಯವಿಲ್ಲ.

(ದಾದೀಜಿಯವರು ಮೆಕ್ಸಿಕೊದಲ್ಲಿನ ಸಮ್ಮೇಳನದ ಸಮಾಚಾರವರನ್ನು ಬಾಪ್ ದಾದಾರವರಿಗೆ ತಿಳಿಸಿದರು) ಚೆನ್ನಾಗಿದೆ- ವಿಜ್ಞಾನದವರಂತು ಕಾರ್ಯದಲ್ಲಿಯೇ ತೊಡಗಿದ್ದಾರೆ. ಪ್ರಯೋಗ ಮಾಡುವುದರಲ್ಲಿ ವಿಜ್ಞಾನಿಗಳು ಬುದ್ಧವಂತರಲ್ಲವೆ. ಹಾಗಾದರೆ ಒಬ್ಬರಾದರೂ ಚೆನ್ನಾಗಿ ಯೋಗಿ ಹಾಗೂ ಪ್ರಯೋಗಿ ಆಗಿಬಿಟ್ಟರೆ ಅತಿದೊಡ್ಡ ಮೈಕ್ ಕಾರ್ಯವನ್ನು ಮಾಡುವರು. (ಲಾಸ್ ಏಂಜಲೀಸ್ ನಲ್ಲಿ ಭೂಕಂಪ ಬಂದಿದೆ) ಈ ಸಮಯದ ತೀವ್ರ ಗತಿಯ ಚಿಹ್ನೆಗಳನ್ನು ಸಮಯ ಸಮಯದಲ್ಲಿ ಪ್ರಕೃತಿಯು ತೋರಿಸುತ್ತಿದ್ದೆ ಒಳ್ಳೆಯದು.

ರಿವೈಸ್ ಕೋರ್ಸ್ 18-01-1994

***ಬ್ರಾಹ್ಮಣ ಜನ್ಮದ ಆದಿಯ ವರದಾನ-ಸ್ನೇಹದ ಶಕ್ತಿ.***

ಬಾಪ್‌ದಾದಾರವರು ಪರಿಶ್ರಮದಿಂದ ಮುಕ್ತರಾಗುವುದಕ್ಕಾಗಿ ಸಹಜ ವಿಧಿ ಸ್ನೇಹದ ಶಕ್ತಿಯನ್ನು ಎಲ್ಲಾ ಮಕ್ಕಳಿಗೂ ವರದಾನವಾಗಿ ಕೊಡುತ್ತಿದ್ದಾರೆ. ಸ್ನೇಹವೇ ಸಹಜ ಯೋಗವಾಗಿದೆ, ಸ್ನೇಹದಲ್ಲಿ ಸಮಾವೇಶ ವಾಗುವುದೇ ಸಂಪೂರ್ಣ ಜ್ಞಾನವಾಗಿದೆ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸ್ನೇಹ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸ್ನೇಹದ ಶಕ್ತಿಯಿಂದ ಪರಿಶ್ರಮವನ್ನು ಸಹಜಗೊಳಿಸಿ ಮನೋರಂಜನೆಯನ್ನಾಗಿ ಮಾಡಿಕೊಂಡಿದ್ದೇನೆ, ದೇಹ ಮತ್ತು ದೇಹದ ಪ್ರಪಂಚವನ್ನು ಕ್ಷಣದಲ್ಲಿ ಮರೆತಿದ್ದೇನೆ ಮತ್ತು ಸ್ಮೃತಿಯಲ್ಲಿ ಸಮಾವೇಶವಾಗಿ ಬಿಟ್ಟಿದ್ದೇನೆ, ಸಹಜವಾಗಿ ಸಮರ್ಪಣೆಯಾಗಿದ್ದೇನೆ, ಸದಾ ಪ್ರತಿ ಸಮಯ ಪರಮಾತ್ಮನ ಸಾಂಗತ್ಯದ ಅನುಭೂತಿಯನ್ನು ಮಾಡುತ್ತಿದ್ದೇನೆ, ಸದಾ ನನ್ನ ಮೇಲೆ ತಂದೆಯ ಆಶೀರ್ವಾದದ ಅಭಯ ಹಸ್ತದ ಛತ್ರಛಾಯೆಯ ಅನುಭವ ಮಾಡುತ್ತಿದ್ದೇನೆ.

2. ನಾನು ಸ್ನೇಹದ ಶಕ್ತಿಯಿಂದ ಅಸಂಭವವನ್ನು ಸಂಭವ ಮಾಡಿದ್ದೇನೆ, ಪ್ರತಿ ಸಮಯ ನಿಶ್ಚಿಯ ಸ್ಥಿತಿಯ ಅನುಭವ ಮಾಡಿಕೊಂಡಿದ್ದೇನೆ, ಪ್ರತಿ ಕಾರ್ಯದಲ್ಲಿ ನಿಶ್ಚಿತವಾದ ವಿಜಯೀ ಸ್ಥಿತಿಯ ಅನುಭವ ಮಾಡಿಕೊಂಡಿದ್ದೇನೆ.

3. ನಾನು ಬ್ರಾಹ್ಮಣ ಜನ್ಮದಿಂದಲೇ ಸ್ನೇಹ ಶಕ್ತಿಯ ವರದಾನವನ್ನು ಪಡೆದಿದ್ದೇನೆ.

4. ನಾನು ಮಾಯೆಯ ಎಷ್ಟೇ ಭಯಾನಕ ಪರಿಸ್ಥಿತಿಯನ್ನು ಅಥವಾ ರಾಯಲ್ ರೂಪವನ್ನೇ ಎದುರಿಸಬೇಕಾದರೂ ಸ್ನೇಹದ ಸಾಗರನಲ್ಲಿ ಸಮಾವೇಶವಾಗಿ ಮಾಯೆಯನ್ನು ದೂರದಿಂದಲೇ ಸಮಾಪ್ತಿ ಮಾಡಿಬಿಟ್ಟಿದ್ದೇನೆ.

5. ನಾನು ಸದಾ ತಂದೆಯ ಸ್ನೇಹದಲ್ಲಿ ಸಮಾವೇಶವಾಗಿರುವ ಸಹಜಯೋಗಿ ಮತ್ತು ಸಂಪೂರ್ಣ ಜ್ಞಾನಿ.

6. ನಾನು ಸಂಗಮ ಯುಗದಲ್ಲಿ ಸ್ನೇಹ ಸಾಗರನ ಸ್ನೇಹದ ಅನುಭವಗಳಿಂದ ಸಂಪನ್ನ ವಾಗಿರುವ ಸಂಪೂರ್ಣ ಸಂಪನ್ನ ಸ್ವರೂಪ.

7. ನಾನು ಕಷ್ಟದಲ್ಲಿ  ಮತ್ತು ಪರಿಸ್ಥಿತಿಗಳಲ್ಲಿ ಹಾರುವ ಕಲೆಯಿಂದ ತಂದೆಯ ಸ್ನೇಹದ ಮಡಿಲಿನಲ್ಲಿ ಸಮಾವೇಶವಾಗಿ ಇರುವ ಸ್ನೇಹ ಸ್ವರೂಪ.